ಸರ್ಕಾರಕ್ಕಿದೆಯೆ?

ಶ್ರೀ ಆರ್.ರೋಷನ್ ಬೇಗ್ (ಪ್ರವಾಸೋದ್ಯಮ ಮತ್ತು ಹಜ್ ಸಚಿವರು):

ಅ) ಮೈಸೂರು ನಗರದ ಚಾಮುಂಡಿ ಬೆಟ್ಟಕ್ಕೆ ರೋಪ್‌ವೇ ಅಳವಡಿಸುವ ಯೋಜನೆಯನ್ನು ಸರ್ಕಾರವು ಹಾಕಿಕೊಂಡಿರುವುದಿಲ್ಲ, ಆದರೆ ಖಾಸಗಿ ಸಂಸ್ಥೆಯಿಂದ ರೋಪ್‌ವೇ ಅಳವಡಿಸಲು ಏಕ ಗವಾಕ್ಷಿ ಸಮಿತಿಯಿಂದ ಅನುಮೋದನೆ ನೀಡಲಾಗಿದೆ.

ಆ) ಮೈಸೂರು ನಗರದ ಆಕರ್ಷಣೆ ಹೆಚ್ಚಿಸಲು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿದೆ:

1. ಮೈಸೂರು ಅರಮನೆ ದೀಪಾಲಂಕಾರ

2. ಸೆಂಟ್ ಫಿಲೋಮಿನಾ ಚರ್ಚ್‌ಗೆ ಹೊನಲು ಬೆಳಕು.

ಇ) ಮೈಸೂರು ಜಿಲ್ಲೆ ಮತ್ತು ತಾಲ್ಲೂಕಿಗೆ ಸಂಬಂಧಿಸಿದಂತೆ ನಿಗಮದ ಅಡಿಯಲ್ಲಿರುವ ಹೋಟೆಲುಗಳು, ದೋಣಿ ವಿಹಾರ ಕೇಂದ್ರಗಳು ಮತ್ತು ಇತರ ಸೌಲಭ್ಯಗಳ ಸಂಖ್ಯೆ 7. ಇದರ ಪೈಕಿ 6 ಹೋಟೆಲುಗಳು ಅಥವಾ ಇತರ ಸೌಲಭ್ಯಗಳು ಲಾಭದಲ್ಲಿ ನಡೆಯುತ್ತಿವೆ. ಒಂದು ಹೋಟೆಲ್ ನಷ್ಟದಲ್ಲಿದೆ.

ಈ) ನಷ್ಟದಲ್ಲಿರುವ ಸೌಲಭ್ಯಗಳ ಬಗ್ಗೆ ಅಧ್ಯಯನ ವರದಿ ಬಂದಿದ್ದು, ಈ ವರದಿಯನ್ನು ನಿಗಮದ ಮಂಡಳಿಯ ಸಭೆಯಲ್ಲಿಟ್ಟು ಸಭೆಯ ತೀರ್ಮಾನದಂತೆ ಸೂಕ್ತ ಕ್ರಮ ಕೈಗೊಳ್ಳಲಾಗುವುದು.

ಉ) ಸದ್ಯಕ್ಕೆ ಇಲ್ಲ.

ಮೈಸೂರು ತಾಲ್ಲೂಕಿನಲ್ಲಿ ಪಶು ಚಿಕಿತ್ಸೆ ಸೌಲಭ್ಯ.

543 (540)

ಶ್ರೀ ಗುರುಸ್ವಾಮಿ ಎ.ಎಸ್.(ಚಾಮುಂಡೇಶ್ವರಿ): ಮಾನ್ಯ ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1) ಮೈಸೂರು ತಾಲ್ಲೂಕಿನಲ್ಲಿ ಕಾರ್ಯನಿರ್ವಹಿಸುತ್ತಿರುವ ವಿವಿಧ ಪಶು ಸೇವಾ ಸಂಸ್ಥೆಗಳು ಯಾವುವು ಮತ್ತು ಎಲ್ಲಿವೆ?

2) ಪಶು ಚಿಕಿತ್ಸಾ ಸೌಲಭ್ಯ ಇಲ್ಲದ ಊರಿಗೆ ಮೊಬೈಲ್ ಸರ್ವೀಸ್ ಮೂಲಕ ಸೌಲಭ್ಯ ಒದಗಿಸುವ ಇಚ್ಛೆ ಸರ್ಕಾರಕ್ಕೆ ಇದೆಯೆ?

3) ಮೈಸೂರು ತಾಲ್ಲೂಕಿನ ಜಾನುವಾರು ಸಂಖ್ಯೆಗನುಗುಣವಾಗಿ ವಾರ್ಷಿಕ ಅನುದಾನ ನೀಡಲಾಗುತ್ತಿದೆಯೇ? ಜಾನುವಾರು ಚಿಕಿತ್ಸೆಗಳಿಗೆ ಮತ್ತು ಔಷಧೋಪಚಾರಗಳಿಗೆ ಆಗುವ ವೆಚ್ಚದಲ್ಲಿ ವ್ಯತ್ಯಾವಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

4) ಹಾಗಿದ್ದಲ್ಲಿ ಇದನ್ನು ನಿವಾರಿಸಲು ಸರ್ಕಾರ ಕೈಗೊಂಡಿರುವ ಕ್ರಮವೇನು?

ಶ್ರೀ ಎ.ಕೃಷ್ಣಪ್ಪ (ಪಶು ಸಂಗೋಪನೆ ಮತ್ತು ಸಕ್ಕರೆ ಸಚಿವರು):

1) ಸಂಸ್ಥೆಗಳ ವಿವರ ಅನುಬಂಧ - 1ರಲ್ಲಿ ನೀಡಲಾಗಿದೆ.

2) ಇದೆ.

3) ಅನುದಾನದ ಲಭ್ಯತೆಯನ್ನು ಅನುಸರಿಸಿ ಹಂಚಿಕೆ ಮಾಡಲಾಗುತ್ತಿದೆ.

4) ಜಿಲ್ಲಾ ಹಾಗೂ ರಾಜ್ಯ ಮಟ್ಟದಲ್ಲಿ ಕ್ರಮ ತೆಗೆದುಕೊಳ್ಳಲಾಗಿದೆ.

ವಿಧಾನ ಸಭಾ ಸದಸ್ಯರಾದ ಶ್ರೀ ಎ ಎಸ್ ಗುರುಸ್ವಾಮಿ, ಇವರು ಮಂಡಿಸಿರುವ ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ: 540

ಅನುಬಂಧ

ಪಶುವೈದ್ಯ ಆಸ್ಪತ್ರೆಗಳು:

1) ನಗರ ಪಶು ಆಸ್ಪತ್ರೆ	:	ಧನ್ವಂತರಿ ರಸ್ತೆ, ಮೈಸೂರು
2) ಪಶು ಆಸ್ಪತ್ರೆ	:	ರಾಜೇಂದ್ರ ನಗರ, ಮೈಸೂರು
3) ಪಶು ಆಸ್ಪತ್ರೆ	:	ಚಾಮುಂಡಿಪುರಂ, ಮೈಸೂರು
4) ಪಶು ಆಸ್ಪತ್ರೆ	:	ಕುಂಬಾರಕೊಪ್ಪಲು, ಮೈಸೂರು
5) ಪಶು ಆಸ್ಪತ್ರೆ	:	ಕೆ.ಜಿ.ಕೊಪ್ಪಲು, ಮೈಸೂರು
6) ಪಶು ಆಸ್ಪತ್ರೆ	:	ಸಿದ್ದರಾಮನಹುಂಡಿ, ಮೈಸೂರು

ಪಶು ಚಿಕಿತ್ಸಾಲಯ

1) ಕೆ.ಎ.ಆರ್.ಪಿ	:	ಮೈಸೂರು ತಾ:
2) ಇಂಡಸ್ಟ್ರೀಯಲ್ ಸಬರ್ಬ್	:	ಮೈಸೂರು ತಾ:
3) ಕೀಳನಪುರ	:	ಮೈಸೂರು ತಾ:
4) ನಜರ್‌ಬಾದ್	:	ಮೈಸೂರು ತಾ:
5) ಬೇರಿಹುಂಡಿ	:	ಮೈಸೂರು ತಾ:
6) ಹಿನಕಲ್	:	ಮೈಸೂರು ತಾ:

ಪ್ರಾಥಮಿಕ ಪಶು ಚಿಕಿತ್ಸಾಲಯ:

1) ಇಟ್ಟಿಗೆಗೂಡು

2) ಇಲವಾಲ

3) ದೊಡ್ಡಿಮಾರಗೌಡನಹಳ್ಳಿ

4) ಉದ್ಬೂರು

5) ಭೋಗಾದಿ

6) ಪಡುವಾರಹಳ್ಳಿ

7) ಜಯಪುರ

8) ಕಡಿಕೊಳ

9) ಸಿದ್ದಲಿಂಗಪುರ

10) ವರುಣ

11) ಕೆ ಹೆಮ್ಮನಹಳ್ಳಿ

12) ಕುಡ್ಡೀಗಾಲ

13) ಕಲ್ಲೂರನಾಗನಹಳ್ಳಿ

14) ದೇವರಾಪುರ

15) ಗುಂಗ್ರಾಲ್ ಛತ್ರ

16) ಹಾರೋಹಳ್ಳಿ (ಮೆಲ್ಲಹಳ್ಳಿ)